

ನನ್ನ ಮನಸ್ಸಿನ ಸ್ಥಿತಿಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ಸರಿಯಾಗಿ ವ್ಯಕ್ತಪಡಿಸುತ್ತದೆ. ಆದಾಗ್ಯೂ, ನಾನು ಬೆಳೆದು ಬಂದದ್ದರ ಬಗ್ಗೆ, ನನ್ನ ಊರು, ನನ್ನ ಪ್ರಯಾಣಗಳು, ನನ್ನ ನೋವು, ನನ್ನ ಖುಷಿಗಳು, ನನ್ನ ಸ್ನೇಹಿತರು, ನನ್ನ ಪ್ರೇಮ, ನಾನಷ್ಟೇ ಕಲ್ಪಿಸಿಕೊಳ್ಳಬಲ್ಲ ನನ್ನ ಸಾವಿನ ಕುರಿತೂ ನಾನು ಪ್ರಾಮಾಣಿಕವಾಗಿ ಮಾತಾಡಿದ್ದೇನೆ. ಹೆಚ್ಚುಕಡಿಮೆ ಒಂದು ಸಾವಿರ ಪುಟಗಳಷ್ಟು ಇರುವ ನನ್ನ ಕಾವ್ಯವನ್ನು ಓದಿದರೆ ನನ್ನ ಬಾಲ್ಯ, ಯೌವನ, ತಾರುಣ್ಯ, ಮಧ್ಯವಯಸ್ಸು ಮತ್ತು ನನ್ನ ವರ್ತಮಾನವಾಗಿರುವ ಇಳಿಗಾಲದ ಬಗ್ಗೆ ನೀವು ಏನು ತಿಳಿಯಬೇಕೋ ಅದನ್ನೆಲ್ಲ ತಿಳಿಯಬಹುದು. ತೀರಿಕೊಂಡಿರುವ ಹಲವು ಕವಿಗಳ ಕುರಿತು ನನ್ನ ಕವಿತೆಗಳಿವೆ, ತಾವಾಗಿಯೇ ಬದುಕನ್ನು ಅಂತ್ಯಗೊಳಿಸಿಕೊಂಡ ಅಥವಾ ಕೊಲ್ಲಲ್ಪಟ್ಟ ಅಥವಾ ಕಾಯಿಲೆಯಿಂದ ಮರಣ ಹೊಂದಿದ ಸ್ನೇಹಿತರ ಬಗ್ಗೆ ಕವಿತೆಗಳಿವೆ. ಇನ್ನೂ ಬದುಕಿರುವ ಸ್ನೇಹಿತರ ಕುರಿತು ಬರೆದಿಲ್ಲ ಅಂತಲ್ಲ. ನನ್ನ ಹಲವು ಕವಿತೆಗಳು ನಾನು ಭೇಟಿಯಾದ, ಮೆಚ್ಚಿಕೊಂಡ ಕವಿಗಳ ಕುರಿತಾಗಿ ಇವೆ. ನನ್ನ ತಂದೆತಾಯಿ, ಒಡಹುಟ್ಟಿದವರನ್ನು ಕಳಕೊಂಡ ನೋವಿನ ಬಗ್ಗೆ ಇವೆ. ಮತ್ತೆ ಕೆಲವು, ಭೂದೃಶ್ಯಗಳನ್ನು ಕುರಿತವು, ಈ ಭೂದೃಶ್ಯಗಳು ನನ್ನ ಅನುಭವಗಳಿಗೆ ಯಾವಾಗಲೂ ಹಿನ್ನೆಲೆ ಒದಗಿಸಿದಂತಹವು. ನನ್ನ ಕಾವ್ಯವು ನನ್ನದೇ ಜೊತೆಗಿನ, ಇತರರ ಜೊತೆಗಿನ, ನಿಸರ್ಗ ಮತ್ತು ಅನಂತ ವಿಶ್ವದ ಜೊತೆಗಿನ ಮಾತುಕತೆ. ಈ ಕವಿತೆಗಳು ನನ್ನ ವೈಯಕ್ತಿಕ ದುಃಖಗಳನ್ನು ಕುರಿತು ಮಾತನಾಡಲು ಮಾತ್ರ ಒದ್ದಾಡಿಲ್ಲ, ಯಾವುದೇ ವಿಚಾರಧಾರೆಗೆ ಕಟ್ಟುಬೀಳದೆ ಇವು ನನ್ನ ಜನರ ದುಃಖಗಳ ಕುರಿತೂ ಒದ್ದಾಡಿವೆ. ಈ ಕವಿತೆಗಳಿಗೆ ಇವುಗಳದೇ ಋತುಮಾನವಿದೆ– ಇವುಗಳದೇ ವಸಂತ, ಬೇಸಗೆ, ಇವುಗಳದ್ದೇ ಮಳೆ ಮತ್ತು ಮಂಜಿನ ಕಾಲಮಾನವಿದೆ.